# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ.

## ಸಿ.ಸಿ. ಸಂಖ್ಯೆ: 330/2020

ಚಾಸಾ–4

ಫ್ರಾಸಾ–1

| | | |
|---|---|---|
| **ಹೆಸರು** | : | ಎಂ ಎಸ್ ಚಿನ್ನಪ್ಪ |
| **ತಂದೆಯ ಹೆಸರು** | : | ಲೇಟ್ ಎಂ ಎ ಸಂಜೀವ |
| **ವಯಸ್ಸು** | : | 65 ವರ್ಷ |
| **ಉದ್ಯೋಗ** | : | ನಿವೃತ್ತ ಸಹಾಯಕ  ಅರಣ್ಯ ಸಂರಕ್ಷಣಾಧಿಕಾರಿ |
| **ವಾಸಸ್ಥಳ** | : | ಕುಶಾಲನಗರ |

**ದಿನಾಂಕ ಃ 20–01–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ ಃ ಮಾನ್ಯ ಸ. ಸ. ಅ. ರವರಿಂದ ಃ –**

1. ನಾನು ಜುಲೈ 2007 ರಿಂದ ಆಗಸ್ಟ್ 2011 ರವರೆಗೆ ವಲಯ ಅರಣ್ಯಧಿಕಾರಿಯಾಗಿ ಕುಶಾಲನಗರ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 18–05–2009 ರಂದು ಬೆಳಗಿನ ಸಮಯ ಸುಮಾರು 7.00 ಗಂಟೆಗೆ ಬಾತ್ಮಿದಾರರಿಂದ ಒಂದು ಕರೆ ಬಂದಿದ್ದು, ಅದರಂತೆ ಮಾಲ್ದಾರೆ ಮೀಸಲು ಅರಣ್ಯದ ಆಸ್ಥಾನ ಎಂಬ ಸ್ಥಳದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ನೆಲೆಸಿದ್ದ 1ನೇ ಆರೋಪಿಯಾದ ಟಿ ಕೆ ಸುರೇಂದ್ರ ಎಂಬುವರು, 2ನೇ ಆರೋಪಿಯಾದ ಮಣಿ ಎಂಬುವವರನ್ನು ಕರೆದುಕೊಂಡು ಜಿಂಕೆಯನ್ನು ಭೇಟೆಯಾಡಿ ಅದನ್ನು ಕೊಂದು, ಸದರಿ ಜಿಂಕೆಯ ಮಾಂಸವನ್ನು ಆತನ

ಮನೆಯಲ್ಲಿಟ್ಟುಕೊಂಡಿರುತ್ತಾರೆ ಎಂದಾಗಿರುತ್ತಾರೆ. ಅದರಂತೆ ನಾನು, ಚಾಸಾ–1 ರಿಂದ 3 ರವರನ್ನು ಕರೆದುಕೊಂಡು, 1ನೇ ಆರೋಪಿಯ ಮನೆಗೆ ಹೋಗಿ, ಮನೆಯನ್ನು ಸುತ್ತುವರೆದಾಗ, ಅಷ್ಟರಲ್ಲಿ 1ನೇ ಆರೋಪಿ ಮನೆಯಿಂದ ಓಡಿ, ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವಾಗ, ಅಷ್ಟರಲ್ಲಿ ಸಿಬ್ಬಂದಿಗಳು ಆತನನ್ನು ಸುತ್ತುವರೆದು ಹಿಡಿದುಕೊಂಡಿರುತ್ತಾರೆ. ನಂತರ ಆತನನ್ನು ವಿಚಾರಿಸಿದಾಗ 1ನೇ ಆರೋಪಿ ಮೀಸಲು ಅರಣ್ಯದಲ್ಲಿ ಜಿಂಕೆಯನ್ನು ಭೇಟೆಯಾಡಿ ಕೆರೆಯ ಪಕ್ಕ ಅದರ ಮಾಂಸವನ್ನು ಮಾಡಿ, ಮಾಂಸವನ್ನು ಮನೆಯಲ್ಲಿಟ್ಟುಕೊಂಡಿದ್ದ ಬಗ್ಗೆ ತಿಳಿಸಿರುತ್ತಾರೆ. ಅದಲ್ಲದೆ ಕೊಂದ ಜಿಂಕೆಯ ತಲೆ ಹಾಗೂ ಅದರ ಅವಶೇಷಗಳನ್ನು ಕೆರೆಯ ನೀರಿನಲ್ಲಿ ಒಳಗಡೆ ಎಸೆದಿರುತ್ತಾರೆ ಎಂದು ತಿಳಿಸಿರುತ್ತಾರೆ.

3. ನಂತರ 1ನೇ ಆರೋಪಿಯ ಮನೆಗೆ ಬಂದು ಶೋಧನೆ ಮಾಡಿದಾಗ, ಒಂದು ಚೆಟ್ಟಿಯಲ್ಲಿ ಅಂದಾಜು 2 ಕೆಜಿಯಷ್ಟು ಮಾಂಸ ಹಾಗೂ ಮಾಂಸ ಮಾಡಿದ ಕತ್ತಿಯನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ನಂತರ ಮನೆಯಲ್ಲಿ ಒಂದು ಒಂಟಿನಳಿಗೆ ಕೋವಿ ಸಿಕ್ಕಿತ್ತು. ಈ ಕುರಿತು 1ನೇ ಆರೋಪಿಯನ್ನು ವಿಚಾರಿಸಿದಾಗ, ಸದರಿ ಒಂಟಿನಳಿಗೆ ಕೋವಿಗೆ ಯಾವುದೇ ಪರವಾನಗಿ ಇರುವುದಿಲ್ಲ, ಅದರಿಂದ ನಾನು 2ನೇ ಆರೋಪಿಯ ಜೊತೆ ಸೇರಿ ಜಿಂಕೆಯನ್ನು ಭೇಟೆಯಾಡಿರುತ್ತೇನೆಂದು ನನಗೆ ತಿಳಿಸಿರುತ್ತಾರೆ. ನಂತರ ಕೃತ್ಯ ಸ್ಥಳದಲ್ಲಿ ಮಹಜರ ಕ್ರಮವನ್ನು ಜರುಗಿಸಿ, ಮಾಂಸ, ಅಲ್ಯುಮಿನಿಯಂ ಪಾತ್ರೆ, ಕತ್ತಿ ಹಾಗೂ ಕೋವಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ.

4. ನಂತರ 1ನೇ ಆರೋಪಿಯನ್ನು 400 ಮೀಟರ್ ದೂರದಲ್ಲಿರುವ ಕೆರೆಯ ಪಕ್ಕದಲ್ಲಿ ಕರೆದುಕೊಂಡು ಹೋಗಿ, ಜಿಂಕೆ ಕೊಂದು ಮಾಂಸ ಮಾಡಿದ ಸ್ಥಳ ಹಾಗೂ ಕೆರೆಯಲ್ಲಿ ಎಸೆದ ಅವಶೇಷಗಳನ್ನು ತೋರಿಸಿಕೊಟ್ಟಿರುತ್ತಾನೆ. ಕೆರೆಯು ತುಂಬಾ ಆಳವಾದ ಕಾರಣ, ಕೆರೆಯಲ್ಲಿ ಎಸೆದ ಜಿಂಕೆಯ ಅವಶೇಷಗಳು ಸಿಕ್ಕಿರುವುದಿಲ್ಲ. ನಂತರ 1ನೇ ಆರೋಪಿಯನ್ನು ನಮ್ಮ ವಲಯ ಅರಣ್ಯ ಕಛೇರಿಯ ಕರೆದುಕೊಂಡು ಬಂದು, ಆತನ ಸ್ವಇಚ್ಛಾ ಹೇಳಿಕೆಯನ್ನು

ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿತರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ. ನಂತರ 1ನೇ ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ, ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಂತರ ಜಿಂಕೆ ಮಾಂಸವನ್ನು ನ್ಯಾಯಾಲಯದ ಅನುಮತಿಯನ್ನು ಪಡೆದು ನಾಶಪಡಿಸಿರುತ್ತೇವೆ. ನಂತರ 2ನೇ ಆರೋಪಿಯನ್ನು ಹುಡುಕಲು ಸಿಬ್ಬಂದಿಯನ್ನು ನೇಮಕ ಮಾಡಿದ್ದು, 2ನೇ ಆರೋಪಿ ಸಿಕ್ಕಿರುವುದಿಲ್ಲ. ನಂತರ ಚಾಸಾ1 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ನಾನು ಆರೋಪಿತರ ವಿರುದ್ದ ಆರೋಪಿ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**5.** ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೋವಿ, ಕತ್ತಿ ಹಾಗೂ ಅಲ್ಯುಮಿನಿಯಂ ಪಾತ್ರೆ ಇರುವ ಭಾವಚಿತ್ರವನ್ನು ನೋಡಿ ಗುರುತಿಸಿದ್ದನ್ನು ನಿಪಿ2 ಎಂದು ಗುರುತಿಸಲಾಯಿತು.

ಪ್ರಮಾಣೀಕೃತ ಹೇಳಿಕೆ ಮುಕ್ತಾಯ.

ಆರೋಪಿಗಳ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಸಹಿ/-

(ಪ್ರದೀಪ ಪೋತದಾರ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ., ವಿರಾಜಪೇಟೆ.